Reg. No. | | | | | | | | | |

# BSCKAL 103/FNDKAL 103/HRDKAL 103

## ಗುಣಾಂಕ ಆಧಾರಿತ ಮೊದಲನೆಯ ಸೆಮಿಸ್ಟರ್ ಬಿ.ಎಸ್ಸಿ/ಬಿ.ಎಸ್ಸಿ (ಎಫ್. ಎನ್.ಡಿ.)/ ಬಿ.ಎ. (ಎಚ್.ಆರ್.ಡಿ.) ಪದವಿ ಪರೀಕ್ಷೆ, ಅಕ್ಟೋಬರ್/ನವೆಂಬರ್ 2014

## ಕನ್ನಡ ಭಾಷಾ ಪತ್ರಿಕೆ – I

## (2013-2014 Batch and Onwards)

ಸಮಯ : 3 ಗಂಟೆಗಳು ಗರಿಷ್ಠಾಂಕಗಳು : 80

### ಭಾಗ – 1 : ಕಾವ್ಯ

I. ಅ) ಒಂದಕ್ಕೆ ಉತ್ತರಿಸಿರಿ : (1×8=8)

1) ಹರಿಶ್ಚಂದ್ರ ತನ್ನ ಪತ್ನಿ ಮತ್ತು ಪುತ್ರನನ್ನು ಮಾರಾಟ ಮಾಡಬೇಕಾಗಿ ಬಂದ ಸನ್ನಿವೇಶವನ್ನು ವಿವರಿಸಿರಿ.

2) ಬಸವಣ್ಣನ ವಚನಗಳಲ್ಲಿ ಅಂತರಂಗ ಶುದ್ಧಿ ಮತ್ತು ಭಕ್ತಿಯ ಡಾಂಭಿಕತೆಯ ಚಿತ್ರಣ ಮೂಡಿ ಬಂದ ಬಗೆ ಹೇಗೆ ?

ಆ) ಒಂದು ಪ್ರಶ್ನೆಗೆ ಉತ್ತರಿಸಿರಿ : (1×5=5)

1) ಭಾರತೀಯ ಸಂಸ್ಕೃತಿಯ ಮೌಲ್ಯಗಳು 'ಯೋಧ ಮತ್ತು ಹೆಂಗಸು' ಕಥನ ಕವನದಲ್ಲಿ ಮೂಡಿ ಬಂದ ಬಗೆ ಹೇಗೆ ?

2) 'ಶ್ರೀರಾಮನವಮಿಯ ದಿವಸ' ಕವನದಲ್ಲಿ ಬಿಂಬಿತವಾಗಿರುವ ಚಿಂತನೆಗಳೇನು ?

ಇ) ಎರಡಕ್ಕೆ ಟಿಪ್ಪಣಿ ಬರೆಯಿರಿ : (2×3=6)

1) ಚಂದ್ರಶೇಖರ ಕಂಬಾರ.

2) 'ಮುಟ್ಟಾಟ' – ಕವಿತೆಯಲ್ಲಿ ಮಾನವ ಸಂಬಂಧಗಳ ಚಿತ್ರಣ.

3) 'ಇಗೊ ಬಂದೆ' – ಕವಿತೆಯ ಆಶಯ.

II. ಅ) ಒಂದು ಪದ್ಯಭಾಗದ ಸಂದರ್ಭಸೂಚಿಸಿ ಮಹತ್ವವನ್ನು ವಿವೇಚಿಸಿರಿ : (1×5=5)

1) ಮುದುಕ ದಿಕ್ಕುಗಳ ಸೊಣಕನು ಮುರಿದು ಹೊಸ ದಿಕ್ಕು –
ಗಳ ಮೇಲೆ ಹೊಸ ಬಾನ ಹೇರಬೇಕು
ಅದಕಾಗಿ ಬಿಸಿ ನೆತ್ತರುಕ್ಕುತಿಹ ಹೇ ಯುವಕ
ನಿತ್ಯನೂತನ ಬದುಕ ಹೊಸೆಯೋಣ ಬಾ!
ಹಳೆ ಹಸಿಯ ಕೆಸರಿಂದ ಕಸಗೋಡು ಕಿತ್ತೇಳು
ಹೊಸ ಯುಗದ ಹಣೆಬರಹ ಬರೆಯೋಣ ಬಾ!

2) ಎನಿಸು ಕಾಲ ಕಲ್ಲು ನೀರೊಳಗಿದ್ದಡೇನು
ನೆನೆದು ಮೃದುವಾಗಬಲ್ಲುದೆ ಅಯ್ಯಾ
ಎನಿಸು ಕಾಲ ನಿಮ್ಮ ಪೂಜಿಸಿ ಏವೆನಯ್ಯಾ
ಮನದಲ್ಲಿ ದೃಢವಿಲ್ಲದನ್ನಕ್ಕ
ನಿಧಾನವ ಕಾಯ್ದಿರ್ದ ಬೆಂತರನಂತೆ
ಅದರ ವಿಧಿ ಎನಗಾಯಿತ್ತು ಕೂಡಲ ಸಂಗಮದೇವಾ

ಆ) **ಎರಡು** ವಾಕ್ಯಗಳ ಸಂದರ್ಭಸೂಚಿಸಿ ಸ್ವಾರಸ್ಯವನ್ನು ವಿಶದಪಡಿಸಿರಿ : **(2×3=6)**

1) ನವ್ಯ ಬ್ರಹ್ಮರು ನಾವು ತೂಗಬೇಕು.
2) ನೇಯುತ್ತಿದ್ದಾಳೆ ವಿಧಿಯ ಬಟ್ಟೆ ಮಗ್ಗದಲಿ.
3) ಕಾನನಕೆ ಹೋಗೇಳೆಲವೊ ಚಿಣ್ಣ.

III. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ **ಒಂದೊಂದು** ವಾಕ್ಯದಲ್ಲಿ ಉತ್ತರಿಸಿರಿ : **(5×1=5)**

1) ಸತ್ಯವೆಂಬುದು ಹರನು ಹರನೆಂಬುದೆ ಸತ್ಯ – ಎಂದು ಬಾಳಿದವರು ಯಾರು ?
2) 'ಮಳೆ ಬಿದ್ದ ನೆಲದಲ್ಲಿ' – ಯಾರು ಬರೆದ ಕವನ ಸಂಕಲನ ?
3) 'ಚಕೋರಿ' – ಇದು ಯಾರು ಬರೆದ ಮಹಾಕಾವ್ಯವಾಗಿದೆ ?
4) ಕೈಯೊಳಗೆ ಕಸಪೊರಕೆ ಬಿಗಿ ಹಿಡಿದು ಬಾ ಎಂದು ಕವಿ ಯಾರಿಗೆ ಹೇಳುತ್ತಾರೆ ?
5) ಬಸವಣ್ಣನ ತಾಯಿಯ ಹೆಸರೇನು ?

## ಭಾಗ - 2 : ಗದ್ಯ

IV. ಅ) **ಒಂದು** ಪ್ರಶ್ನೆಗೆ ಉತ್ತರಿಸಿರಿ : **(1×8=8)**

1) ಕಾರ್ಮಿಕ ವರ್ಗದ ಶೋಷಣೆಯನ್ನು 'ಬಂಧ ಮುಕ್ತಿ' ಕಥೆ ಅನಾವರಣಗೊಳಿಸಿದ ಬಗೆ ಹೇಗೆ ?
2) 'ಬಂದನಾ ಹುಲಿರಾಯನು' ಪ್ರಬಂಧದ ಸ್ವಾರಸ್ಯವನ್ನು ನಿರೂಪಿಸಿರಿ.

ಆ) **ಒಂದು** ಪ್ರಶ್ನೆಗೆ ಉತ್ತರಿಸಿರಿ : **(1×8=8)**

1) ಆರೋಗ್ಯವಂತ ಸಮಾಜ ಸ್ಥಾಪನೆಯ ಸಂದೇಶವು 'ಒಂಟಿ ಬ್ಯಾರಿಯೂ ಅವಭೃತ ಉತ್ಸವವೂ' ಕಥೆಯಲ್ಲಿ ಹೇಗೆ ವ್ಯಕ್ತಗೊಂಡಿದೆ ?
2) ಕನ್ನಡ ಮತ್ತು ಇಂಗ್ಲೀಷ್ ಸಂಬಂಧದ ಹೊಸ ವಿನ್ಯಾಸವನ್ನು ಕುರಿತು ಲೇಖಕರ ವಿಚಾರಗಳೇನು ? ವಿವರಿಸಿರಿ.

ಇ) **ಒಂದು** ಪ್ರಶ್ನೆಗೆ ಉತ್ತರಿಸಿರಿ : **(1×5=5)**

1) ಶೀನಪ್ಪ ಸಾಹುಕಾರನಾದ ಬಗೆಯನ್ನು ವಿವರಿಸಿರಿ.
2) ರಾಷ್ಟ್ರೀಯತೆಯ ಕುರಿತು ಲೇಖಕರ ಚಿಂತನೆಗಳೇನು ?

V. **ಒಂದಕ್ಕೆ** ಟಿಪ್ಪಣಿ ಬರೆಯಿರಿ : (1×5=5)

1) ಕನ್ನಡ ಭಾಷಾಭಿವೃದ್ಧಿಯ ಕುರಿತಂತೆ ಲೇಖಕರ ಅಭಿಪ್ರಾಯ ಸಂಗ್ರಹಿಸಿರಿ.

2) ಜಾತ್ಯತೀತ ಸಮಾಜ ಸ್ಥಾಪನೆಯ ಬಗ್ಗೆ ನಿಮ್ಮ ಅಭಿಪ್ರಾಯ ತಿಳಿಸಿರಿ.

3) ಗ್ರಾಮೀಣ ಪ್ರದೇಶದಲ್ಲಿನ ದುಡಿಯುವ ವರ್ಗದ ಸಮಸ್ಯೆಗಳನ್ನು ಕುರಿತು ವಿವರಿಸಿರಿ.

VI. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ **ಒಂದೊಂದು** ವಾಕ್ಯದಲ್ಲಿ ಉತ್ತರಿಸಿರಿ : (4×1=4)

1) ರಂಗಯ್ಯನ ತಮ್ಮನ ಹೆಸರೇನು ?

2) ಒಂಟಿ ಬ್ಯಾರಿ ಕಪಿಲಳ್ಳಿಯಲ್ಲಿ ಕೊಂಡ ಮನೆ ಯಾರದಾಗಿತ್ತು ?

3) 'ನಮ್ಮೊಡನೆ ನಮ್ಮ ನುಡಿ' – ಕೃತಿಯನ್ನು ಬರೆದ ಲೇಖಕ ಯಾರು ?

4) 'ಪಕ್ಷಿಕಾಶಿ' – ಇದು ಯಾರು ಬರೆದ ಕವನ ಸಂಕಲನ ?

## ಭಾಗ – 3 : ಕ್ರಿಯಾತ್ಮಕ ಕನ್ನಡ

VII. **ಒಂದು** ಪ್ರಶ್ನೆಗೆ ಉತ್ತರಿಸಿರಿ : (1×8=8)

1) ಪ್ರಬಂಧ ಎಂದರೇನು ? ಅದರ ಸ್ವರೂಪ ಮತ್ತು ಪ್ರಕಾರಗಳನ್ನು ಕುರಿತು ವಿವರಿಸಿರಿ.

2) ಕನ್ನಡದಲ್ಲಿ ವಿಜ್ಞಾನ ಸಾಹಿತ್ಯ ಮೂಡಿ ಬಂದ ಬಗೆ ಮತ್ತು ಅದರ ಮಹತ್ವವನ್ನು ವಿವರಿಸಿರಿ.

VIII. **ಒಂದು** ಪ್ರಶ್ನೆಗೆ ಉತ್ತರಿಸಿರಿ : (1×5=5)

1) ವಿಜ್ಞಾನ ಸಾಹಿತ್ಯದ ಬೆಳವಣಿಗೆಯಲ್ಲಿ ಪಾತ್ರವಹಿಸಿದ ಸಂಘ ಸಂಸ್ಥೆಗಳು ಯಾವುವು ?

2) ಪ್ರಕೃತಿ ಪ್ರೇಮದ ಬಗ್ಗೆ ಪ್ರಬಂಧವನ್ನು ಬರೆಯಿರಿ.

IX. ಪ್ರತಿಯೊಂದಕ್ಕೂ **ಒಂದೊಂದು** ವಾಕ್ಯದಲ್ಲಿ ಉತ್ತರಿಸಿರಿ : (2×1=2)

1) 'ಪದ್ಯಂ ವದ್ಯಂ ಗದ್ಯಂ ಹೃದ್ಯಂ' – ಎಂದು ಹೇಳಿದವರು ಯಾರು ?

2) ಮೊದಲನೆಯ ಅಖಿಲ ಕರ್ನಾಟಕ ವಿಜ್ಞಾನ ಸಮ್ಮೇಳನವು ಎಲ್ಲಿ ನಡೆಯಿತು ?

---